RVCE Runner up in Inter varsity Chess Championship 2015

Vijay Times

4/2/15

# ಶ್ವ ಮಟ್ಟದಲ್ಲಿ ಆರ್‌ವಿ ಲೇಜು ರನ್ನರ್ ಅಪ್




ನ್ಯದಲ್ಲಿ ನಡೆದ ಅಂತಾರಾಷ್ಟ್ರೀಯ ಅಂತರ-ವಿಶ್ವವಿದ್ಯಾಲಯ ಚೆಸ್ ಚಾಂಪಿಯನ್‌ಶಿಪ್‌ನಲ್ಲಿ
: ಸ್ಥಾನ ಪಡೆದ ಆರ್‌ವಿ ಇಂಜಿನಿಯರಿಂಗ್ ಕಾಲೇಜು ತಂಡ ಪ್ರಶಸ್ತಿ ಪತ್ರ ಸ್ವೀಕರಿಸುತ್ತಿರುವುದು.

CAMPUS ಕಾರ್ನರ್

ಮಲೇಷ್ಯಾದ ಯೂನಿವರ್ಸಿಟಿ ಆಫ್ ಮಲಯಾದಲ್ಲಿ ನಡೆದ 19ನೇ ಜಿಎಸಿಸಿ ಅಂತಾರಾಷ್ಟ್ರೀಯ ಅಂತರ-ವಿಶ್ವವಿದ್ಯಾಲಯ ಚೆಸ್ ಚಾಂಪಿಯನ್ ಷಿಪ್‌ನಲ್ಲಿ ಬೆಂಗಳೂರಿನ ಆರ್‌ವಿ ಎಂಜಿನಿಯರಿಂಗ್ ಕಾಲೇಜು ಎರಡನೇ ಸ್ಥಾನ ಪಡೆದುಕೊಂಡಿದೆ. ಮಲೇಷ್ಯಾ ಚೆಸ್ ಫೆಡರೇಷನ್ ಸಹಯೋಗದಲ್ಲಿ ವಿಶ್ವದ ಬೇರೆ ಬೇರೆ ಕಾಲೇಜಿನ ಪದವಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಜಿಎಸಿಸಿ ಚೆಸ್ ಚಾಂಪಿಯನ್ ಷಿಪ್‌ನಲ್ಲಿ ಭಾರತ, ಜರ್ಮನಿ, ಫ್ರಾನ್ಸ್, ಲಾತ್ವಿಯಾ, ಸಿಂಗಾಪುರ, ಶ್ರೀಲಂಕಾ ಮುಂತಾದ ದೇಶಗಳ ಸುಮಾರು 20 ವಿಶ್ವವಿದ್ಯಾಲಯಗಳ 112 ಸ್ಪರ್ಧಿಗಳು ಭಾಗವಹಿಸಿದ್ದರು.

**ಅಂತಾರಾಷ್ಟ್ರೀಯ ಅಂತರ ವಿವಿ ಚೆಸ್: ಮುಕ್ತ ವಿಭಾಗದಲ್ಲಿ ಗಹನ್‌ಗೆ 2ನೇ ಸ್ಥಾನ**

ಆರ್‌ವಿ ಎಂಜಿನಿಯರಿಂಗ್ ಕಾಲೇಜಿನ ಆರನೇ ಸೆಮಿಸ್ಟರ್ ವಿದ್ಯಾರ್ಥಿ ಎಂ.ಜಿ. ಗಹನ್ ಮುಂದಾಳತ್ವದಲ್ಲಿ ಅಂಟೋನಿಯೊ ವಿಯಾನಿ ಡಿಕುನ್ಹಾ, ವನೆಸ್ಸಾ ಡಿಸೋಜಾ, ಆರ್. ನಾಗೇಶ್, ಡಿ. ಯಶಸ್ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಮುಕ್ತ ವಿಭಾಗದಲ್ಲಿ ಎಂ.ಜಿ. ಗಹನ್ ಎರಡನೇ ಸ್ಥಾನ ಪಡೆದರು. ಹುಡುಗಿಯರ ವಿಭಾಗದಲ್ಲಿ ವನೆಸ್ಸಾ ನಾಲ್ಕನೆಯ ಸ್ಥಾನ ಪಡೆದರು. ಉಳಿದವರು ಕ್ರಮವಾಗಿ ನಂತರದ ಸ್ಥಾನಗಳನ್ನು ಪಡೆದುಕೊಂಡರು.

ಸಿಂಗಾಪುರದ ಎನ್‌ಟಿಯು ಯೂನಿವರ್ಸಿಟಿ 26.5 ಅಂಕ ಗಳಿಸಿ ಮೊದಲ ಸ್ಥಾನ ಪಡೆದರೆ, ಆರ್‌ವಿ ಎಂಜಿನಿಯರಿಂಗ್ ಕಾಲೇಜು 25.5 ಅಂಕ ಪಡೆದು ರನ್ನರ್ ಅಪ್ ಆಯಿತು. ಆರ್‌ವಿ ಕಾಲೇಜಿನ ದೈಹಿಕ ಶಿಕ್ಷಕ ಸಿ.ಎನ್. ವಿಶ್ವನಾಥ್ ತಂಡಕ್ಕೆ ಮಾರ್ಗದರ್ಶಕರಾಗಿ ತೆರಳಿದ್ದರು.

ಈಗಾಗಲೇ ಅಂಟೋನಿಯೊ ವಿಯಾನಿ ಡಿಕುನ್ಹಾ ಮತ್ತು ಡಿ. ಯಶಸ್ ಕರ್ನಾಟಕ ಸರ್ಕಾರ ನೀಡುವ ಏಕಲವ್ಯ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಅಲ್ಲದೆ, 2014ರಲ್ಲಿ ಪುಣೆಯಲ್ಲಿ ನಡೆದ ವರ್ಲ್ಡ್ ಜೂನಿಯರ್ಸ್ ಚೆಸ್ ಚಾಂಪಿಯನ್ ಷಿಪ್‌ನಲ್ಲಿ ವಿಯಾನಿ ಡಿಕುನ್ಹಾ, ಡಿ. ಯಶಸ್ ಮತ್ತು ಎಂ.ಜಿ. ಗಹನ್ ಭಾರತವನ್ನು ಪ್ರತಿನಿಧಿಸಿದ್ದರು. ಈ ಬಾರಿ ಮಲೇಷ್ಯಾದಲ್ಲಿ ನಡೆದ ಚೆಸ್ ಚಾಂಪಿಯನ್ ಷಿಪ್‌ನಲ್ಲಿ ಕಾಲೇಜನ್ನು ಪ್ರತಿನಿಧಿಸಿದ ಎಲ್ಲ ಸ್ಪರ್ಧಿಗಳೂ ರಾಷ್ಟ್ರೀಯ, ಅಂತಾರಾಷ್ಟ್ರೀಯ ಮತ್ತು ರಾಜ್ಯ ಮಟ್ಟದಲ್ಲಿ ಪದಕ ಗೆದ್ದವರೇ ಆಗಿದ್ದಾರೆ.

ಲೇಜುಗಳಿಗಾಗಿಯೇ ಇರುವ ವಿಶೇಷ ಅಂಕಣವಿದು. ನಿಮ್ಮ ಕಾಲೇಜಿನಲ್ಲಿ ನಡೆಯುವ ಯಾವುದೇ ಕಾರ್ಯಕ್ರಮಗಳ ಬಗ್ಗೆ ನಮಗೆ ವಿವರ ಕಳುಹಿಸಬಹುದು. email: goodmorningvv@gmail.com